ಕರ್ನಾಟಕ ವಿಧಾನ ಸಭೆ

ಬುಧವಾರ ೧೯ನೇ ಡಿಸೆಂಬರ್ ೧೯೯೦

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೩೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ವಿಷಯ : ರೈತರ ಸಾಲ ಮನ್ನಾ ಮಾಡುವ ಬಗ್ಗೆ

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಸಭಾಧ್ಯಕ್ಷರೆ, ಮೊನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಪ್ರಕಾರ ಪ್ರಧಾನ ಮಂತ್ರಿಗಳ ಹತ್ತಿರ ಹೋದರೆ ಏನೂ ಲಾಭ ಇಲ್ಲವೆಂದು ಹೇಳಿದ್ದಾರೆ. ಆದರೆ ರಾಜ್ಯದ ರೈತರ ಪರವಾಗಿ ಹೋಗಲೇಬೇಕಾಗುತ್ತದೆ.....

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ :– ಸ್ವಾಮಿ, ರೈತರು ಯಾರ ಸ್ವತ್ತೂ ಅಲ್ಲ. ದಿನಬೆಳಗಾದರೆ ಇವರು ಒಂದೊಂದು ವಿಚಾರ ತರುತ್ತಲೇ ಇರುತ್ತಾರೆ. ಇದರ ಬಗ್ಗೆ ತಾವು ಒಂದು ತಡೆ ಹಾಕಲೇಬೇಕು. ಇವರೊಬ್ಬರಿಗೆ ಮಾತ್ರ ರೈತರ ಬಗ್ಗೆ ಕಾಳಜಿ ಇಲ್ಲ, ಇಲ್ಲಿರತಕ್ಕ ನಮಗೆಲ್ಲರಿಗೂ ರೈತರ ಬಗ್ಗೆ ಕಾಳಜಿ ಇದೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಕೇಳಿ ನಾನು ಒಂದು ವಿಚಾರವನ್ನು ಹೇಳಬೇಕೆಂದಿದ್ದೇನೆ. ಇಲ್ಲಿ ಮಾನ್ಯ ಸಭಾ ನಾಯಕರೂ ಇದ್ದಾರೆ.

ಅಧ್ಯಕ್ಷರು :– ಕೊಶ್ಚನ್ ಅವರ್ ಆದಮೇಲೆ ಏತಕ್ಕೆ ಇದನ್ನು ತೆಗೆದುಕೊಳ್ಳಬಾರದು ?

ಶ್ರೀ ಡಿ. ಬಿ. ಚಂದ್ರೇಗೌಡ :– ಅಷ್ಟು ಹೊತ್ತಿಗೆ ಇದು ಮುಗಿದುಹೋಗುತ್ತದೆ. ಅವರೂ ಕೂಡ ಪ್ರಶ್ನೋತ್ತರ ವೇಳೆಯಲ್ಲಿ ಭಾಗವಹಿಸಲೆಂಬ ಉದ್ದೇಶದಿಂದ ನಾನು ತಮ್ಮ ಅಪ್ಪಣೆ ಪಡೆದು.....

ಅಧ್ಯಕ್ಷರು :– ಮಹಿಳಾ ಸದಸ್ಯರು ಏನು ಹೇಳುತ್ತಾರೋ ಕೇಳೋಣ.

ಶ್ರೀಮತಿ ಮೋಟಮ್ಮ :– ಪ್ರಶ್ನೋತ್ತರ ವೇಳೆ ಬಹಳ ಮುಖ್ಯವಾದುದು. ಮಾನ್ಯ ಸದಸ್ಯರು ಏನಾದರೂ ಪ್ರಸ್ತಾಪ ಮಾಡುವುದಿದ್ದರೆ ಕ್ವೊಶ್ಚನ್ ಅವರ್ ಆದಮೇಲೆ ಜೀರೋ ಅವರ್‌ನಲ್ಲಿ ಪ್ರಸ್ತಾಪ ಮಾಡಲಿ.

ಅಧ್ಯಕ್ಷರು :– ಮಾನ್ಯ ಮೋಟಮ್ಮನವರು ಹೇಳಿದಂಥ ಅಭಿಪ್ರಾಯವನ್ನು ನಾನು ಸಮರ್ಥಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಜೀರೋ ಅವರ್ ಎಂಬುದು ಈಗ ಇಲ್ಲ. ಜೀರೋ ಅವರ್ ಎಂದು ಇದ್ದುದನ್ನೇ ನಿಯಮ 334 ಎಂದು ಬದಲಾವಣೆ ಮಾಡಿರತಕ್ಕದ್ದು.

ಶ್ರೀ ಪಾಟಾಳ್ ನಾಗರಾಜ್ :– ಇದನ್ನು ಒಪ್ಪಿಕೊಳ್ಳಬೇಕು.

ಶ್ರೀ ಬಿ. ಎಂ. ಇದಿನಬ್ಬ :– ಪ್ರಶ್ನೋತ್ತರದ ನಂತರ ಯಾವುದಾದರೂ ಬಹಳ ಪ್ರಾಮುಖ್ಯವಾದ ವಿಚಾರ ಇದ್ದರೆ ಅದನ್ನು ತರಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೆ, ನನ್ನ ಮನವಿ ಇಷ್ಟೇ ಕಳೆದ 3 ದಿನಗಳಿಂದ ಶಾಸನ ಸಭೆಯಲ್ಲಿ ಹಿರಿಯ ಸದಸ್ಯರಾದ ಮಾನ್ಯ ಯಡಿಯೂರಪ್ಪನವರೂ ಮತ್ತು ಅವರ ಪಕ್ಷದ ಸದಸ್ಯರೂ ಧರಣಿ-ಕುಳಿತಿದ್ದಾರೆ ಅವರನ್ನು ಅಲ್ಲಿ ಕೂಡಿಸಿಕೊಂಡು ನಾವು ಶಾಸನ ಸಭೆಯನ್ನು ನಡೆಸುವುದು ಶೋಭೆ ತರತಕ್ಕದ್ದಲ್ಲ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ: ಅವರ ಪ್ರಶ್ನೆ ಏನೆಂದರೆ, ರೈತರ ವಿಚಾರದಲ್ಲಿ ತಾವು ಚರ್ಚೆಗೆ ಇಲ್ಲಿ ಒಂದು ಅವಕಾಶವನ್ನು ಮಾಡಿಕೊಟ್ಟರೆ ಬರಬಹುದಾದ ಫಲಿತಾಂಶ ಮೇಲೆ ಒಂದು ನಿರ್ಣಯವನ್ನು ಮಾಡಬಹುದೆಂದು ಹೇಳುತ್ತಿದ್ದಾರೆ. ಆದ್ದರಿಂದ ತಾವು ಅದಕ್ಕೆ ಅವಕಾಶವನ್ನು ಮಾಡಿಕೊಡಬೇಕು

ಅಧ್ಯಕ್ಷರು :– ಈಗ ಪ್ರಶ್ನೆ ಇರತಕ್ಕಂಥದ್ದು ಪ್ರಶ್ನೋತ್ತರ ವೇಳೆ. ಈ ಪ್ರಶ್ನೋತ್ತರ ವೇಳೆ ಆದಮೇಲೆ ಇದರ ಬಗ್ಗೆ ಗಮನ ಹರಿಸಬಹುದು. ಈ ಮಧ್ಯ ಮಾನ್ಯ ಬಿ. ಜೆ. ಪಿ. ಸದಸ್ಯರಿಗೆ ಸೂಚಿಸಿರತಕ್ಕಂಥದ್ದು ಮತ್ತು ವಿನಂತಿ ಮಾಡಿಕೊಳ್ಳತಕ್ಕಂಥದ್ದೇನೆಂದರೆ, ಈ ಸಭೆ ಇರತಕ್ಕಂಥದ್ದು ಪ್ರಸ್ತುತ ಜ್ವಲಂತ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ; ಆದ್ದರಿಂದ ಇದರ ಬಗ್ಗೆ ಚರ್ಚೆಯಾಗಬೇಕೆನ್ನುವುದು ತಮ್ಮ ಅಭಿಪ್ರಾಯವಾದರೆ ನಾನು ಈ ದಿವಸ ಸದನದ ಕಾರ್ಯಕಲಾಪಗಳ ಸಮಿತಿಯನ್ನು ಕರೆಯುತ್ತೇನೆ. ಅನಂತರ ಸಮಿತಿಯ ಮಾರ್ಗದರ್ಶನವನ್ನು ಪಡೆದು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಆದ್ದರಿಂದ ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕೆಂದು ಸೂಚನೆ ಮಾಡುತ್ತೇನೆ.

(ಮಾನ್ಯ ಶ್ರೀ ಯಡಿಯೂರಪ್ಪನವರು ತಮ್ಮ ಸ್ಥಾನಕ್ಕೆ ಬಂದರು)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಅದೇ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ನಾನು ಮತ್ತು ಮಾನ್ಯ ಬೈರೇಗೌಡರು ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟು ಒಂದು ತಿಳಿವಾತಾವರಣ ಉಂಟುಮಾಡಿಕೊಟ್ಟದ್ದಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಜೊತೆಗೆ ಎಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ :– ಮಾನ್ಯ ಅಧ್ಯಕ್ಷರೇ ಈ ರೀತಿಯಾದರೆ ಬಹಳ ಪ್ರಮುಖವಾದ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ನಿನ್ನೆ ಕೂಡ ಲ್ಯಾಪ್ಸ್ ಆಗಿವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ ನಾವು ಆ ಮಾತಿಗೆ ತಲೆಬಾಗುವುದಕ್ಕಾಗಿ ಇಲ್ಲಿರುವಂಥದ್ದು. ರೈತರ ಮಕ್ಕಳಾಗಿ ತಾವು ಅಧ್ಯಕ್ಷಸ್ಥಾನದಲ್ಲಿದ್ದೀರಿ. ರೈತರ ನೆರವಿಗೆ ಬರುವ ಬಗ್ಗೆ ಎಲ್ಲರಿಗೂ ಕಳಕಳಿ ಇದೆ. ಇವತ್ತು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುವುದು. ನಿನ್ನೆ ಮೊನ್ನೆಯಿಂದಲೇ ಸರ್ಕಾರದವರು ನಮ್ಮನ್ನು ಕರೆದು ಮಾತುಕತೆ ಆಡುತ್ತೇವೆಂದಿದ್ದರೆ ಯಾವ ನಿಮಿಷದಲ್ಲಾದರೂ ಚರ್ಚೆ ಮಾಡಲು ನಾವು ಸಿದ್ಧರಿದ್ದೆವು. ಈಗಲೂ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳನ್ನು ಮೀಟ ಮಾಡಿ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳುವುದಾದರೆ ಅದಕ್ಕೆ ನಾವು ಸಿದ್ಧ. ತಾವು ಈಗ ಭರವಸೆ ಕೊಟ್ಟಿದ್ದೀರಿ, ಈಗ ಚರ್ಚೆಮಾಡಿ ಅದರ ಆಧಾರದಮೇಲೆ ಸರ್ಕಾರ ಒಂದು ತೀರ್ಮಾನಕ್ಕೆ ಬರಲಿ ಎಂದು ತಾವು ಹೇಳಿದ್ದೀರಿ. ನಾನು ಏನು ಹೇಳುತ್ತೇನೆಂದರೆ, ನಾನೊಬ್ಬನೇ ರೈತರ ಪರವಾಗಿರತಕ್ಕಂಥವನು ನಮ್ಮದು ಮಾತ್ರ ರೈತರ ಪರವಾಗಿರತಕ್ಕಂಥ ಪಾರ್ಟಿ, ಬೇರೆ ಯಾರು ಇಲ್ಲವೆಂದಲ್ಲ; ಈಗಲೂ ತಾವು ತಮ್ಮ ಕೊಟ್ಟಡಿಯಲ್ಲಿ ಮಾತನಾಡಿದಂತೆ ಹನ್ನೆರಡೂರವರೆ ಗಂಟೆಗೆ ಸದನದ ಸಮಿತಿಯನ್ನು ಕರೆದು ಚರ್ಚೆಮಾಡಿ ಅದರ ಆಧಾರದಮೇಲೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಯಡಿಯೂರಪ್ಪ ಹತ್ತಿರ ಮಾತನಾಡುವಂಥದ್ದು ಏನೂ ಇಲ್ಲ ಎಂಬ ಭಾವನೆ ಕೆಲವರಲ್ಲಿದೆ. ಆದರೆ ರೈತರ ಬಗ್ಗೆ ಇಲ್ಲಿರತಕ್ಕಂಥವರೆಲ್ಲರಿಗೂ ಕಳಕಳಿ ಇದೆ; ಆ ಭಾವನೆ ಇದೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಸುಸೂತ್ರವಾಗಿ ಮಾತುಕತೆ ನಡೆಸಿದರೆ ಒಳ್ಳೆಯದೆಂದು ಹೇಳಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ :– ಹಳೆಯ ಹೈದರಾಬಾದ್ ಕರ್ನಾಟಕದಲ್ಲಿ ಖಾಸಗೀ ಶಾಲೆಗಳಿಗೆ ಅನುದಾನ ನೀಡದಿರುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 230 (898)

ಶ್ರೀ ಮಲ್ಲಿಕಾರ್ಜುನ ಬಸಪ್ಪ ನಿವಟರ್ (ಕೊಪ್ಪಳ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಳೇ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಪ್ರಾರಂಭವಾದ ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಅನುದಾನ ನೀಡದಿರಲು ಕಾರಣಗಳೇನು ?

ಆ) ಹಳೇ ಬಾಂಬೆ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕ ಭಾಗಗಳಲ್ಲಿಯೂ ಮೊದಲಿನಿಂದಲೂ ಅನುದಾನ ಕೊಡುತ್ತಿರುವುದು ನಿಜವೇ ?

ಇ) ಈ ವ್ಯವಸ್ಥೆ ನಿಜವಿದ್ದರೆ ಹೈದರಾಬಾದ್ ಕರ್ನಾಟಕ ಭಾಗದ ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಕೂಡಾ ಅನುದಾನ ನೀಡಲಾಗುವುದೇ ?